ಪಠಣ ಕುತೂಹಲ



ಎಂ.ಎಸ್. ಶ್ರೀರಾಮ್

# ಮುಂಬೈ ದಲ್ಲಾಳಿಗಳ ಶರವಣ ಸರ್ವಿಸಸ್

**ಬ್ರೋಕರೇಜ್, ಫೆಸಿಲಿಟೇಷನ್, ಪ್ಲಾನರ್, ಅರೇಂಜ್‌ಮೆಂಟ್ ಎನ್ನುವ ಈ ಸೇವೆಗಳಲ್ಲಿ ಯಾವುದು ಕಾನೂನು ಬದ್ಧ, ಯಾವುದು ಭ್ರಷ್ಟಾಚಾರದ ಅಂಚಿನಲ್ಲಿದೆ ಎಂದು ಊಹಿಸುವುದು ಕಷ್ಟವೇ...**

ವಿವೇಕ ಶಾನಭಾಗರ ಒಂದು ಕಥೆ ಮತ್ತು ಅವರ ಇತ್ತೀಚಿನ 'ಇಲ್ಲಿರುವುದು ಸುಮ್ಮನೆ' ನಾಟಕದಲ್ಲಿ ಶರವಣ ಸರ್ವಿಸಸ್ ಬಗ್ಗೆ ಪ್ರಸ್ತಾಪವಿದೆ. ಶರವಣ ಯಾವುದೇ ಕಾರ್ಯಾಲಯದಲ್ಲಿ ಯಾವುದೇ ಕೆಲಸವನ್ನು ಮಾಡಿಸುವ ಛಾತಿ ಉಳ್ಳವನು. ಪೂಜೆ, ಪುನಸ್ಕಾರ, ವಾಸ್ತು, ಬಾಡಿಗೆಗೆ ಮನೆ, ಸರ್ಕಾರಿ ಕಾರ್ಯಾಲಯದ ಕೆಲಸ, ಡ್ರೈವಿಂಗ್ ಲೈಸೆನ್ಸು, ಏನಾದರೂ ಸರಿಯೇ. ಸಮಯ, ಕಾನೂನಿನ ತಿಳಿವಳಿಕೆ, ವ್ಯವಸ್ಥೆಯ ಪರಿಜ್ಞಾನ, ನಿಯಮಾವಳಿ – ಈ ಎಲ್ಲ ತೊಂದರೆಗಳನ್ನು ಮೀರುವುದಕ್ಕೆ ಶರವಣ ತನ್ನ ಸೇವೆಗಳನ್ನು ಒದಗಿಸುತ್ತಾನೆ. ಅವನು ಮನೆ ಮಾರಾಟ, ಬಾಡಿಗೆದಾರರನ್ನು ಹಿಡಿಯುವ – ಯಾವುದೇ ಕೆಲಸವನ್ನು ಸುಗಮಗೊಳಿಸಿಕೊಡುವ ಏಜೆಂಟ್, ಅಥವಾ ದಲ್ಲಾಳಿ. ಆದರೆ, ಶರವಣ ಒಬ್ಬ ವ್ಯಕ್ತಿಯಲ್ಲ. ಶರವಣ ಎನ್ನುವುದು ಅನೇಕ ನಾಗರಿಕ ಸೇವೆಗಳನ್ನು ಪಡೆಯಲು ಬೇಕಾದ, ತುಕ್ಕು ಹಿಡಿದ ಸರ್ಕಾರಿ ಯಂತ್ರಾಂಗದಲ್ಲಿ ಅವಶ್ಯವಾದ ತೈಲ.

ಕಾನೂನಿನ, ನೈತಿಕತೆಯ ಲೇಪವಿಲ್ಲದಿದ್ದರೆ ದಲ್ಲಾಳಿಯೆಂದು ಕರೆಯಲ್ಪಡುವ ಈ ಮಧ್ಯವರ್ತಿಗಳಿಗೆ ಘನತೆ ಬರುತ್ತದೆ. 'ಫೆಸಿಲಿಟೇಟಿಂಗ್ ಏಜೆನ್ಸಿ', 'ಮ್ಯಾರೇಜ್ ಪ್ಲಾನರ್', 'ಇಂಟರ್‌ಮೀಡಿಯೇಷನ್ ಸರ್ವಿಸಸ್' ಎನ್ನುವ ಘನತೆಯ ಹೆಸರುಗಳಿರುವ ದೊಡ್ಡ ವ್ಯಾಪಾರಗಳಾಗುತ್ತವೆ. ಭಾಷಾ ಪ್ರಯೋಗದಲ್ಲಿಯೂ ಒಂದು ಜಾತಿವ್ಯವಸ್ಥೆಯಿರುವುದನ್ನು ಕಾಣಬಹುದು. ಹೆಸರು ಎಷ್ಟು ಇಂಗ್ಲೀಷು ಮತ್ತು ಅದರಲ್ಲೂ ಎಷ್ಟು ಸಂಭಾವಿತವೆನಿಸಿದರೆ ಅಷ್ಟು ಆ ಕೆಲಸಕ್ಕೆ ಘನತೆ ಬಂದುಬಿಡುತ್ತದೆ.

ಈ 'ಶರವಣ ಸರ್ವಿಸಸ್' ಎನ್ನುವ ಪರಿಕಲ್ಪನೆಯನ್ನು ಪರಿಶೀಲಿಸುವ ಒಂದು ಅದ್ಭುತ ಪುಸ್ತಕ, ಲಿಸಾ ಜೋರ್ಕ್‌ಮನ್ ಸಂಪಾದಿಸಿರುವ 'ಬಾಂಬೆ ಬ್ರೋಕರ್ಸ್'. ನಮ್ಮ ಜೀವನವನ್ನು ಸುಗಮಗೊಳಿಸುವತ್ತ ಮತ್ತು ಅವಶ್ಯಕತೆಗಳನ್ನು ಪೂರೈಸುವತ್ತ ಎಷ್ಟು ಗಮ್ಮತ್ತಿನ ಕಾಯಕಗಳು ಉದ್ಭವಿಸಬಹುದು ಎನ್ನುವ ಅನೇಕ ಶರವಣರ ಕಥೆಗಳು ಈ ಪುಸ್ತಕದಲ್ಲಿವೆ. ಯಾವುದೇ ಶುಲ್ಕ ತೆಗೆದುಕೊಳ್ಳದೇ ಜನರ ಅವಶ್ಯಕತೆಯ ಸರ್ಕಾರಿ ಸೇವೆಗಳ ಕೋರಿಕೆಯನ್ನು ಮಂಡಿಸಲು – ಕೆಲಸ ಮಾಡಿಸಿಕೊಡುವ ಸಮಾಜ ಸೇವೆ ಮಾಡಲು ಸಿದ್ಧವಾಗಿರುವ ಬೃಹತ್ ಮುಂಬಯಿ ಮಹಾನಗರಪಾಲಿಕೆಯ ಮಾಜಿ ಉದ್ಯೋಗಿ ಡಾ. ಕೆ, ತಮ್ಮ ಹಳೆಯ ಪರಿಚಯ ಮತ್ತು ಗೆಳೆತನವನ್ನು ಉಪಯೋಗಿಸಿ, ನಿಯಮಗಳ ಚೌಕಟ್ಟಿನಲ್ಲಿ